# ದಾವಣಗೆರೆ ವಿಶ್ವವಿದ್ಯಾನಿಲಯ

**ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007.**

**ದೂರವಾಣಿ ಸಂಖ್ಯೆ: 08192-208029**


## :ಅಧಿಸೂಚನೆ:

**ವಿಷಯ:** **ಸ್ನಾತಕ ಪದವಿ ವಿವಿಧ ಕೋರ್ಸ್‌ಗಳಲ್ಲಿ "ಭಾರತದ ಸಂವಿಧಾನ" ಪತ್ರಿಕೆಯನ್ನು ಬೋಧಿಸುವ ಬಗ್ಗೆ.**

ಉಲ್ಲೇಖ:
1. ವಿ.ವಿ. ವ್ಯಾಪ್ತಿಯ ಕಾಲೇಜುಗಳ ರಾಜ್ಯಶಾಸ್ತ್ರ ಅಧ್ಯಾಪಕರ ವೇದಿಕೆಯ ಪತ್ರ ದಿನಾಂಕ: 10.04.2018.
2. ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ತಿನ ಸಭೆಯ ನಿರ್ಣಯ ದಿನಾಂಕಗಳು: 26.06.2018 ಮತ್ತು 27.06.2018.
3. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 07.07.2018.

************

**ಪ್ರಸ್ತಾವನೆ:-**

1. ವಿಶ್ವವಿದ್ಯಾನಿಲಯದ ಸ್ನಾತಕ ಪದವಿ ಕೋರ್ಸ್‌ಗಳ ಬೋಧನಾ ವ್ಯವಸ್ಥೆಯಲ್ಲಿ 2016-17ನೇ ಶೈಕ್ಷಣಿಕ ಸಾಲಿನಿಂದ ಸಿಬಿಸಿಎಸ್ ಪದ್ಧತಿಯನ್ನು ಜಾರಿಗೊಳಿಸಲಾಗಿತ್ತು. ಸರ್ಕಾರದ ನಿರ್ದೇಶಾನುಸಾರ "ಭಾರತದ ಸಂವಿಧಾನ", "ಪರಿಸರ ವಿಜ್ಞಾನ" ಹಾಗೂ ಇನ್ನಿತರ ಕಡ್ಡಾಯ ವಿಷಯಗಳನ್ನು (Mandatory Subjects) ಒಂದೊಂದು ಸೆಮಿಸ್ಟರುಗಳಲ್ಲಿ ಒಂದೊಂದು ವಿಷಯವನ್ನು ಎಲ್ಲಾ ಕೋರ್ಸ್‌ಗಳಲ್ಲಿ ಬೋಧಿಸುವ ಬಗ್ಗೆ (4ನೇ ಸೆಮಿಸ್ಟರ್‌ಗಳಲ್ಲಿ ಬೇರೆ ಬೇರೆ ವಿಷಯಗಳನ್ನು ಬೋಧಿಸುವ ಬಗ್ಗೆ) ಅಧಿಸೂಚಿಸಲಾಗಿತ್ತು. ಈ ರೀತಿಯ ಬೋಧನೆಯು ವೈಜ್ಞಾನಿಕವಾಗಿಲ್ಲವೆಂದು ಸ್ನಾತಕ ಪದವಿ ಮಟ್ಟದ ಬೋಧಕರ ವೇದಿಕೆಯವರು ವಿಶ್ವವಿದ್ಯಾನಿಲಯಕ್ಕೆ ಅನೇಕ ಸಂದರ್ಭಗಳಲ್ಲಿ ಮನವಿ ಸಲ್ಲಿಸಿದ್ದರು.
2. ತದನಂತರ, ವಿಶ್ವವಿದ್ಯಾನಿಲಯದ ವ್ಯಾಪ್ತಿಯ ರಾಜ್ಯಶಾಸ್ತ್ರ ಪ್ರಾಧ್ಯಾಪಕರ ವೇದಿಕೆಯ ದಿನಾಂಕ: 10.04.2018ರಂದು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಮನವಿಯಲ್ಲಿ "ಭಾರತದ ಸಂವಿಧಾನ" ಪತ್ರಿಕೆಯನ್ನು ಬಿ.ಎ. ಪದವಿ ಕೋರ್ಸ್‌ಗಳಲ್ಲಿ ಪ್ರಥಮ ಸೆಮಿಸ್ಟರಿನಲ್ಲಿ ಮತ್ತು ಬಿ.ಎಸ್ಸಿ ಬಿ.ಕಾಂ. ಹಾಗೂ ಬಿ.ಬಿ.ಎಂ. ಕೋರ್ಸ್‌ಗಳಲ್ಲಿ ದ್ವಿತೀಯ ಸೆಮಿಸ್ಟರಗಳಲ್ಲಿ ಬೋಧಿಸುವ ಬಗ್ಗೆ ವಿಶ್ವವಿದ್ಯಾನಿಲಯದಿಂದ ನಿರ್ದೇಶನ ನೀಡಬೇಕೆಂದು ಕೋರಿರುತ್ತಾರೆ.
3. ಮೇಲ್ಕಂಡ ರಾಜ್ಯಶಾಸ್ತ್ರ ಅಧ್ಯಾಪಕರುಗಳ ವೇದಿಕೆಯ ಮನವಿಯನ್ನು ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:26.06.2018ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟಿನ ಸಭೆಗೆ ಹಾಗೂ ದಿನಾಂಕ: 27.06.2018 ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ತಿನ ಸಭೆಗೆ ಮಂಡಿಸಲಾಗಿತ್ತು.
4. ಮೇಲ್ಕಂಡ ಎರಡು ಪ್ರಾಧಿಕಾರಗಳ ಸಭೆಗಳಲ್ಲಿ ರಾಜ್ಯಶಾಸ್ತ್ರ ಅಧ್ಯಾಪಕರ ವೇದಿಕೆಯ ಮನವಿಯಲ್ಲಿನ ಕೋರಿಕೆಯ ಬಗ್ಗೆ ಕೂಲಂಕುಷ ಚರ್ಚೆಯ ನಂತರ "ಭಾರತದ ಸಂವಿಧಾನ" ಪತ್ರಿಕೆಯನ್ನು ಬಿ.ಎ. ಕೋರ್ಸಿನ ಪ್ರಥಮ ಸೆಮಿಸ್ಟರಿನಲ್ಲಿ ಮತ್ತು ಬಿ.ಎಸ್ಸಿ., ಬಿ.ಕಾಂ., ಮತ್ತು ಬಿ.ಬಿ.ಎಂ. ಕೋರ್ಸ್‌ಗಳಲ್ಲಿ ದ್ವಿತೀಯ ಸೆಮಿಸ್ಟರನಲ್ಲಿ ಬೋಧನೆಗೆ ಕ್ರಮಕೈಗೊಳ್ಳುವುದರಿಂದಾಗುವ ಸಾಧಕ/ಬಾಧಕಗಳ ಬಗ್ಗೆ ಪರಿಶೀಲಿಸಲಾಯಿತು.

ಮು.ತಿ.ನೋ.

5. ಸದರಿ ಅಧ್ಯಾಪಕರ ವೇದಿಕೆಯ ಮನವಿಯಲ್ಲಿ "ಭಾರತದ ಸಂವಿಧಾನ" ಪತ್ರಿಕೆಯನ್ನು ವಿವಿಧ ಕೋರ್ಸ್‌ಗಳಿಗೆ ವಿವಿಧ ಸೆಮಿಸ್ಟರುಗಳಲ್ಲಿ ಬೋಧನೆಗೆ ಅವಕಾಶ ಕಲ್ಪಿಸಿದಲ್ಲಿ ಶೈಕ್ಷಣಿಕ ಕಾರ್ಯಭಾರ ಹಂಚಿಕೆಯಲ್ಲಿ ಬೋಧಕರಿಗೆ ಅನುಕೂಲವಾಗುವುದರಿಂದ 2018-19ನೇ ಶೈಕ್ಷಣಿಕ ಸಾಲಿನಿಂದ "ಭಾರತದ ಸಂವಿಧಾನ" ಪತ್ರಿಕೆಯನ್ನು ಬೇರೆ ಬೇರೆ ಸೆಮಿಸ್ಟರುಗಳಲ್ಲಿ ಬೋಧಿಸಲು ನಿರ್ಣಯಿಸಲಾಯಿತು.

6. ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ತಿನ ನಿರ್ಣಯಗಳನ್ನು 2018-19ನೇ ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸುವ ಬಗ್ಗೆ ಮಾನ್ಯ ಕುಲಪತಿಗಳ ಅನುಮೋದನೆಯ ಹಿನ್ನೆಲೆಯಲ್ಲಿ ಈ ಕೆಳಕಂಡ ಅಧಿಸೂಚನೆ.

**ಅಧಿಸೂಚನೆ ಸಂಖ್ಯೆ: ದಾವಿವಿ/ಶೈಕ್ಷಣಿಕ/43/2018-19/3104 ದಿನಾಂಕ: 12.07.2018**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ "ಭಾರತದ ಸಂವಿಧಾನ" ಪತ್ರಿಕೆಯನ್ನು 2018-19ನೇ ಶೈಕ್ಷಣಿಕ ಸಾಲಿನಿಂದ ಈ ಕೆಳಕಂಡಂತೆ ವಿವಿಧ ಸೆಮಿಸ್ಟರುಗಳಲ್ಲಿ ಬೋಧಿಸುವ ಬಗ್ಗೆ ಕ್ರಮಕೈಗೊಳ್ಳಲು ಅಧಿಸೂಚಿಸಿದೆ.

| ಕ್ರ. ಸಂ. | ಕೋರ್ಸ್‌ಗಳ ವಿವರ | ಪ್ರಥಮ ಸೆಮಿಸ್ಟರ್ ಕಡ್ಡಾಯ ಪತ್ರಿಕೆಗಳು | ದ್ವಿತೀಯ ಸೆಮಿಸ್ಟರ್ ಕಡ್ಡಾಯ ಪತ್ರಿಕೆಗಳು |
|---|---|---|---|
| 1 | ಬಿ.ಎ, ಬಿ.ಎಸ್.ಡಬ್ಲ್ಯೂ | ಭಾರತದ ಸಂವಿಧಾನ | ಪರಿಸರ ವಿಜ್ಞಾನ |
| 2 | ಬಿ.ಎಸ್ಸಿ, ಬಿ.ಸಿ.ಎ. ಮತ್ತು ಬಿ.ಕಾಂ. ಬಿ.ಬಿ.ಎಂ. | ಪರಿಸರ ವಿಜ್ಞಾನ | ಭಾರತದ ಸಂವಿಧಾನ |

"ಭಾರತದ ಸಂವಿಧಾನ" ಪತ್ರಿಕೆಯನ್ನು ಬೋಧಿಸಲು ಮೇಲ್ಕಂಡಂತೆ ವೇಳಾಪಟ್ಟಿಯ ನಿಗದಿಪಡಿಸಿ, ಇನ್ನುಳಿದ ಕಡ್ಡಾಯ ವಿಷಯಗಳನ್ನು ಈ ಹಿಂದಿನಂತೆಯೇ ಬೋಧಿಸುವ ಕ್ರಮಕೈಗೊಳ್ಳಲು ತಿಳಿಸಲಾಗಿದೆ.

ಆದೇಶಾನುಸಾರ,

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ - 577002.

ಇವರಿಗೆ,

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿ:-

1. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
2. ಡೀನರು, ಕಲಾ, ವಿಜ್ಞಾನ, ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
3. ಮಾನ್ಯ ಕುಲಪತಿಗಳ/ಕುಲಸಚಿವರ ಆಪ್ತಕಾರ್ಯಾಲಯ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
4. ಹೆಚ್ಚುವರಿ ಪ್ರತಿ/ಕಛೇರಿ ಪ್ರತಿ.